

ರಾಮನನ್ನು ವೈಭವೀಕರಿಸಲಾಗಿತ್ತು. ಆ ಆಶಯವನ್ನು ಮುರಿದು ರಾವಣನೂ ಉದಾತ್ತ, ವಿವೇಕಿ, ತಪಸ್ವಿ ಎಂದು ನಾಗಚಂದ್ರ ಹೇಳಹೊರಟ. ರಾಮಾಯಣ ಎಂದಕೂಡಲೇ ಅದು ರಾವಣ ಸಂಹಾರದ ಕಥೆ ಎಂಬುದೇ ಬಹುಜನರ ನಂಬಿಕೆಯಾಗಿದೆ. ದುಷ್ಟ ನಿಗ್ರಹವನ್ನು ಮಾಡುವುದಕ್ಕಾಗಿಯೇ ರಾಮನು ಅವತರಿಸಿದ್ದಾನೆಂದು ಭಾವಿಸಿದ್ದರಿಂದಲೇ, ಆತ ಉದಾತ್ತ ನಾಯಕ ಎನಿಸಿಕೊಂಡ. ಆದರೆ, ರಾಮಚಂದ್ರ ಚರಿತ ಪುರಾಣದ ರಾವಣ ಬೇರೊಬ್ಬರಿಗೆ ಕೆಡುಕು ಮಾಡುವ ನೀಚನಲ್ಲ; ಜಿನಭಕ್ತ. ಆತನಲ್ಲಿ ಉದಾತ್ತ ಗುಣವಿದ್ದೂ ಕ್ಷಣಮಾತ್ರದಲ್ಲಿ ಪ್ರವೃತ್ತಿ ದೋಷಕ್ಕೆ ಒಳಗಾಗಿ ಅಪರಾಧವನ್ನು ಎಸಗುತ್ತಾನೆ. ಈ ಹಿನ್ನೆಲೆಯಲ್ಲಿ ಕೆಲವು ಪ್ರಸಂಗಗಳನ್ನು ಗಮನಿಸಬಹುದು:

ಒಮ್ಮೆ ನಳಕೂಬರನೆಂಬ ಪರಾಕ್ರಮಿಯೊಬ್ಬ ರಾವಣನ ಮೇಲೆ ಯುದ್ಧಸಾರಿ, ವಜ್ರಪಾಲ ಎಂಬ ಕೋಟೆಯನ್ನು ನಿರ್ಮಿಸಿ, ಪಟ್ಟಣಕ್ಕೆ ದುರ್ಲಂಘ್ಯಪುರ ಎಂಬ ಹೆಸರನ್ನಿಟ್ಟು ಧೈರ್ಯಗೆಡದೆ ಇರುತ್ತಾನೆ. ಆ ಪಟ್ಟಣವನ್ನು ಹೇಗೆ ವಶಪಡಿಸಿಕೊಳ್ಳಬೇಕೆಂದು ರಾವಣ ಆಲೋಚಿಸುತ್ತಿರುವ ವೇಳೆಗೆ, ನಳಕೂಬರನ ಪತ್ನಿಯಾದ ವಿಲಾಸವತಿ ಹಲವು ದಿನಗಳಿಂದ ರಾವಣನಲ್ಲಿ ಮೋಹಿತಳಾಗಿರುವುದು ಆಕೆಯ ದಾಸಿಯಿಂದ ತಿಳಿದು ಬರುತ್ತದೆ. ರಾಜಕೀಯ ಚತುರನಾದ ರಾವಣ ಅವಳನ್ನು ಬರಮಾಡಿಕೊಂಡು 'ನಿನಗಮೆನಗಂ ದುರ್ಲಂಘ್ಯ ಪುರದೊಳ್ ಕೂಟಮಪ್ಪಂತುಟಂ(ಸಮ್ಮಿಲನ) ಮಾಡು' ಎಂದು ಕೇಳುತ್ತಾನೆ. ಅದಕ್ಕೆ ಒಪ್ಪಿದ ಆಕೆ, ತನ್ನ ಗಂಡ ಕೋಟೆಯನ್ನು ಹೇಗೆ ರಚಿಸಿದ್ದಾನೆ; ಅದನ್ನು ಹೇಗೆ ಭೇದಿಸಬೇಕೆಂಬ ವಿದ್ಯೆಯನ್ನು ತಿಳಿಸುತ್ತಾಳೆ. ಯುದ್ಧದಲ್ಲಿ ನಳಕೂಬರ ರಾವಣನ ವಶವಾಗುತ್ತಾನೆ. ಆದರೆ, ಅವನನ್ನು ಬಂಧಿಸುವುದಿಲ್ಲ. ವಿಲಾಸವತಿಯನ್ನು ರಹಸ್ಯವಾಗಿ ಕರೆದು ಹೀಗೆ ಹೇಳುತ್ತಾನೆ:

...ನೀಂ ವಿಶುದ್ಧಿಕುಲದ ಕುಶಧ್ವಜಂಗಂ
ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮಂ
ಬಗೆದು ಶೀಲಪರಿಪಾಲನಂ ಮಾಳ್ಪುದಂತಲ್ಲದೆಯುಂ
ನೀನೆನಗೆ ವಿದ್ಯೋಪದೇಶಂಗೆಯ್ದು ಗುರುವಾದುದ
ಱಿಂದೇನುಮಂ ಬಗೆಯದೆ ನಳಕೂಬರನೊಳ್ಕೂಡಿ
ಸುಖಮಿರು...

(ನಿನ್ನ ಕುಲದ ಆಚಾರವನ್ನು ಯೋಚಿಸಿ, ನಿನ್ನ ಶೀಲ ಪರಿಪಾಲನವನ್ನು ಮಾಡಿಕೊಳ್ಳಬೇಕು ಅಲ್ಲದೆ, ನೀನು ನನಗೆ ವಿದ್ಯೆಯನ್ನು ಉಪದೇಶಿಸಿ ಗುರುವಾದುದರಿಂದ, ಬೇರೆ ಯಾವುದನ್ನೂ ಮನಸ್ಸಿನಲ್ಲಿ ತಂದುಕೊಳ್ಳದೆ ನಳಕೂಬರನನ್ನು ಕೂಡಿ ಸುಖದಿಂದಿರು).

ಈ ನುಡಿಗಳು ರಾವಣನ ಶುದ್ಧ ನೈತಿಕ ಪ್ರಜ್ಞೆಗೆ ಸಾಕ್ಷಿ. ಅನಂತರ ಇಂದ್ರನ ಮೇಲೆ ವಿಜಯ ಸಾಧಿಸಿ, ಅವನನ್ನು ಸೆರೆಹಿಡಿದು 'ಕೊಲ್ಲುವುದಿಲ್ಲ; ಅಂಜದಿರು' ಎಂದು ಅಭಯ ವಚನವನ್ನು ನೀಡುತ್ತಾನೆ. ವರುಣನ ವಿರುದ್ಧ ಯುದ್ಧ ಮಾಡಲು ಹೊರಟಾಗ ರಾವಣ – ಹನುಮ ಪರಸ್ಪರ ನಮಸ್ಕರಿಸಿ ಅಪ್ಪಿಕೊಳ್ಳುವ ಪ್ರಸಂಗ ನಡೆಯುತ್ತದೆ. ಅವರಿಬ್ಬರ ಸಂಬಂಧ ಅಪರೂಪದ್ದು ಎನ್ನುವ ಹಾಗೆ ನಾಗಚಂದ್ರ ನಿರೂಪಿಸುತ್ತಾನೆ. ಇದು ವಾಲ್ಮೀಕಿ ರಾಮಾಯಣಕ್ಕಿಂತ ಅತ್ಯಂತ ಭಿನ್ನವಾದ ಕಲ್ಪನೆ. ಹೀಗೆ, ಉದಾರಿಯೂ ಧೀರನೂ ಆತ್ಮೀಯನೂ ಆದ ದಶಾನನ ದಿಢೀರನೆ ತಪ್ಪು ಎಸಗುವುದಕ್ಕೆ ಕಾರಣವೇನು? ಈ ಸಂದೇಹಕ್ಕೆ ಕವಿ ಕಾವ್ಯದುದ್ದಕ್ಕೂ ತಾರ್ಕಿಕವಾದ ಸಮರ್ಥನೆಯನ್ನು ನೀಡಿದ್ದಾನೆ.

ಕೆಲವು ವೇಳೆ ಅನಿರಿಕ್ಷಿತ ಆಕಸ್ಮಿಕಗಳು ಸಂಭವಿಸಿ ಆಕ್ರಮಣ, ಸಂಚುಕೋರತನ, ಅಪಹರಣ,